**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 21.11.2025**

**ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿ ಪರ ವಕೀಲರಿಂದಃ**

1. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಲೇವಾದೇವಿ ವ್ಯವಹಾರವನ್ನು ಮಾಡುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 137/2018 ಮತ್ತು 138/2018 ನ್ನು ಪ್ರತಿವಾದಿಯ ವಿರುದ್ಧ ಹಣ ವಸಾಲಾತಿಗೆ ಕೋರಿ ಸಲ್ಲಿಸಿರುತ್ತೇನೆ ಇದರ ಹೊರತು ನಾನು ಪಾಂಡವಪುರ ಸಿವಿಲ್ ನ್ಯಾಯಾಲಯದಲ್ಲಿ ಬೇರೆಯವರ ವಿರುದ್ಧವು ಸಹಾ ಹಣ ವಸೂಲಾತಿ ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯು ಅಸಲು ದಾವಾ ಸಂಖ್ಯೆ 344/2015 ಆಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ದಾವೆಯು ಡಿಕ್ರಿಗೊಂಡು ಜಾರಿ ಅರ್ಜಿಯನ್ನು ಇದೇ ನ್ ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯ ಪ್ರತಿವಾದಿಗಳು ರಾಮಕೃಷ್ಣ ಮತ್ತು ರತ್ನಮ್ಮ ಇವರು ನಮ್ಮ ಗ್ರಾಮದವರು ಎಂದರೆ ಸರಿ. ನಾನು ಲೇವಾದೇವಿ ವ್ಯವಹಾರವನ್ನು ನಡೆಸುತ್ತಿದ್ದರೂ ಸಹಾ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ವ್ಯವಸಾಯವನ್ನು ಮಾಡುತ್ತೇನೆ. ನನ್ನ ಹೆಸರಿನಲ್ಲಿ ಪಹಣಿ ಪತ್ರಗಳು ಇರುತ್ತವೆ. ಸದರಿ ಪಹಣಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವ್ಯವಸಾಯದಿಂದ ನನಗೆ ವಾರ್ಷಿಕವಾಗಿ ಸುಮಾರು 4 ಲಕ್ಷ ವರಮಾನ ಬರುತ್ತದೆ. ಸದರಿ 4 ಲಕ್ಷ ವರಮಾನ

ವನ್ನು ತೋರಿಸಲು ನ್ಯಾಯಾಲಯಕ್ಕೆ ಆದಾಯ ತೆರಿಗೆ ದಾಖಲಾತಿ ಅಥವಾ ಇತರ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯ ಮಗ ಮೃತ ಲೋಕೇಶರವರಿಗೆ ನಮ್ಮ ಊರಿನ ಹುಡುಗಿಯನ್ನು ಮದುವೆ ಮಾಡಿ ಕೊಟ್ಟಿರುತ್ತಾರೆ ಹೀಗಾಗಿ ನನಗೆ ಆತನ ಪರಿಚಯ ಇರುತ್ತದೆ. ಮೃತ ಲೋಕೇಶರವರು ಟಿ ಎಸ್ ಛತ್ರ ಗ್ರಾಮದವರಾಗಿರದೇ ಬಳಗುಪ್ಪೆ ಗ್ರಾಮದವರಾಗಿರುತ್ತಾರೆ ಎಂದರೆ ಸರಿ. ಸದರಿ ಮೃತ ಲೋಕೇಶರವರು ಮದುವೆಗೂ ಪೂರ್ವದಲ್ಲಿ ಏನು ವ್ಯವಹಾರ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿದೆ. ಅವರ ಮದುವೆ ಯಾವ ವರ್ಷ ಆಗಿರುತ್ತದೆ ಎಂದು ನನಗೆ ನೆನಪಿಲ್ಲ.

3. ಮೃತ ಲೋಕೇಶರವರು ಮದುವೆಯಾದ ನಂತರ ನನ್ನಿಂದ ಸಾಲವನ್ನು ಪಡೆದಿರುತ್ತಾರೆ. ಮೃತ ಲೋಕೇಶರವರು ವ್ಯವಸಾಯವನ್ನು ಮಾಡುತ್ತಿರಲಿಲ್ಲ ಅವರು ಪೆಟ್ಟಿಗೆ ಅಂಗಡಿಯನ್ನು ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿಯು ಅವರು ಸ್ವಲ್ಪ ಸಮಯ ಹೋಟೆಲ್ ನಡೆಸುತ್ತಿದ್ದರು ಉಳಿದ ಸಮಯ ವ್ಯವಸಾಯವನ್ನು ಮಾಡುತ್ತಿದ್ದರು. ಮೃತ ಲೋಕೇಶರವರ ಕುಟುಂಬದ ನಿರ್ವಹಣೆಯನ್ನು ಅವರ ತಂದೆ 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮೃತ ಲೋಕೇಶರವರಿಗೆ ಯಾವುದೇ ರೀತಿ ಹಣದ ಅಗತ್ಯ ಇರಲಿಲ್ಲ ಅವರು ನನ್ನಿಂದ ಹಣವನ್ನು ಸಾಲವಾಗಿ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

4. ಮೃತ ಲೋಕೇಶರವರು ಹಸು ತೆಗೆದುಕೊಳ್ಳಬೇಕು ಎಂದು ನನ್ನ ಬಳಿ ಸಾಲ ತೆಗೆದುಕೊಂಡಿರುತ್ತಾರೆ. ಮೃತ ಲೋಕೇಶರವರ ಹೆಂಡತಿಯ ಮನೆ ನಮ್ಮ ಮನೆಯ

ಕೂಗಳತೆ ದೂರದಲ್ಲಿದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ಒಂದೇ ಬೀದಿಯಲ್ಲಿದೆ ಎಂದು ನುಡಿಯುತ್ತಾರೆ. ಮೃತ ಲೋಕೇಶರವರವರಿಗೆ ಸಾಲ ನೀಡುವ ಮೊದಲು ಅವರ ಹೆಂಡತಿಯ ತಂದೆಯ ಬಳಿ ವಿಚಾರಿಸಿರುವುದಿಲ್ಲ. 3 ನೇ ಪ್ರತಿವಾದಿಯ ತಂದೆಯ ಪರಿಚಯ ನನಗಿದೆ. ಮೃತ ಲೋಕೇಶರವರವರು ಸಾಲವನ್ನು ನನ್ನ ಬಳಿ ಕೇಳುವಾಗ ಈ ಬಗ್ಗೆ 3 ನೇ ಪ್ರತಿವಾದಿಯ ತಂದೆಯ ಬಳಿ ತಿಳಿಸಲು ಯಾವುದಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಲೋಕೇಶರವರು ಮಾವನಿಗೆ ತಿಳಿಸಬೇಡಿ ಅವರಿಗೆ ನೋವಾಗುತ್ತದೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಮೃತ ಲೋಕೇಶರವರರು ಆ ರೀತಿ ನನ್ನ ಬಳಿ ಹೇಳಿರುವುದಿಲ್ಲ, ನನ್ನ ಬಳಿ ಯಾವುದೇ ಸಾಲವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

5. ಮೃತ ಲೋಕೇಶರವರರು ನನ್ನ ಬಳಿ 20 ಸಾವಿರ ಹಣವನ್ನು ಸಾಲವನ್ನು ಪಡೆದಿರುತ್ತಾರೆ. ಸಾಲ ಪಡೆಯುವ 1 ತಿಂಗಳ ಮೊದಲೇ ಅವರು ನನ್ನ ಬಳಿ ಹಣವನ್ನು ಕೇಳಿದರು. ಆ ಸಂದರ್ಭದಲ್ಲಿ ಟಿ ಕೆ ಮೂರ್ತಿ ಎನ್ನುವವರಿದ್ದರು. ಅವರು ಟಿ ಎಸ್ ಛತ್ರ ಗ್ರಾಮದವರಾಗಿರುತ್ತಾರೆ. ಟಿ ಕೆ ಮೂರ್ತಿಯವರ ಮನೆ 3 ನೇ ಪ್ರತಿವಾದಿಯ ತಂದೆಯ ಮನೆಯ ಪಕ್ಕದಲ್ಲಿದೆ ಎಂದರೆ ಸರಿ. 2016 ಇಸವಿಯಲ್ಲಿ ಸಾಲ ಪಡೆದ ನಂತರ ಮೃತ ಲೋಕೇಶರವರು ಸುಮಾರು ಒಂದುವರೆ ಎರಡು ವರ್ಷದ ನಂತರ ಮರಣ ಹೊಂದಿರುತ್ತಾರೆ. ಮೃತ ಲೋಕೇಶರವರು ಜೀವಿತಾವಧಿಯಲ್ಲಿ ಬಡ್ಡಿಯನ್ನು ಪಾವತಿಸಿರುವುದಿಲ್ಲ, ತರಕಾರಿ ನೀಡುತ್ತೇನೆ ಎಂದು ತಿಳಿಸಿದ್ದರು.

*6. ಒಂದುವರೆ ವರ್ಷದ ಅವಧಿಯಲ್ಲಿ ನಾನು ಮೃತ ಲೋಕೇಶರವರು ಬಡ್ಡಿ ನೀಡಲಿಲ್ಲ ಎಂದು ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಸಾಕ್ಷಿ ಮುಂದುವರಿದು ಅವರು ತರಕಾರಿ ನೀಡುತ್ತೇನೆ ಎಂದು ಹೇಳಿದ ಕಾರಣ ನಾನು ಮಧ್ಯದಲ್ಲಿ ಅವರನ್ನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಮೃತ ಲೋಕೇಶರವರು ತರಕಾರಿಯನ್ನು ಬೆಳೆಸುತ್ತಿರಲಿಲ್ಲ ಅವರು ನನ್ನಿಂದ ಯಾವುದೇ ಸಾಲವನ್ನು ಪಡೆದಿರುವುದಿಲ್ಲ ನಾನು ಅವರು ಮರಣ ಹೊಂದಿದ ನಂತರ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.*

*7. ನಾನು 2 ನೇ ಬಾರಿ ಮೃತ ಲೋಕೇಶರವರಿಗೆ ಅವರು ಮರಣ ಹೊಂದುವ ಒಂದುವರೆ ವರ್ಷದ ಒಳಗೆ ಸಾಲವನ್ನು ನೀಡಿರುತ್ತೇನೆ. 2 ನೇ ಬಾರಿಯು ಸಹಾ ನಾನು 3 ನೇ ಪ್ರತಿವಾದಿಯ ತಂದೆಗೆ ಈ ವಿಚಾರವನ್ನು ತಿಳಿಸಿರುವುದಿಲ್ಲ. 2 ನೇ ಬಾರಿ ಹಣವನ್ನು ಒಂದುವರೆ ತಿಂಗಳ ಪೂರ್ವದಲ್ಲಿ ಕೇಳಿರುತ್ತಾರೆ, ಆ ಸಂದರ್ಭದಲ್ಲಿ ನಾವಿಬ್ಬರೇ ಹಾಜರಿದ್ದೇವು. ಮೃತ ಲೋಕೇಶರವರಿಗೆ ನಾನು ಪಾಂಡವಪುರದ ನ್ಯಾಯಾಲಯದ ಸಮೀಪದ ಪತ್ರ ಬರಹಗಾರರ ಕಛೇರಿಯಲ್ಲಿ ನೀಡಿರುತ್ತೇನೆ. ಆ ಸಂದರ್ಭದಲ್ಲಿ ಪತ್ರ ಬರಹಗಾರರಾದ ರಾಮಮೂರ್ತಿ, ಸಾಕ್ಷಿದಾರರಾದ ಟಿ ಕೆ ಮೂರ್ತಿ, ಮೃತ ಲೋಕೇಶ ಹಾಜರಿದ್ದರು. ಸಾಕ್ಷೀದಾರರನ್ನು ಮೃತ ಲೋಕೇಶ್ ರವರೇ ಕರೆದುಕೊಂಡು ಬಂದಿರುತ್ತಾರೆ. ನಾನು ಯಾವುದೇ ಹಣವನ್ನು ನೀಡಿರುವುದಿಲ್ಲ. ಸಾಕ್ಷೀದಾರರೊಡನೆ ಸೇರಿಕೊಂಡು ಸುಳ್ಳು ದಾಖಲಾತಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.*

8. ಹಣವನ್ನು ನಾನು ನಗದಿನ ಮುಖಾಂತರ ನೀಡಿರುತ್ತೇನೆ. ನಾನು ಹಣವನ್ನು 100 ರೂಪಾಯಿ ಮುಖ ಬೆಲೆಯ ನೋಟಿನ ಮುಖಾಂತರ ನೀಡಿರುತ್ತೇನೆ. ನಿಪಿ-1 ಮತ್ತು ನಿಪಿ-2ರ ಒಕ್ಕಣೆಗಳನ್ನು ಬರೆದ ನಂತರ ಸಾಕ್ಷಿಗಳು ಸಹಿ ಹಾಕಿರುತ್ತಾರೆ. ಒಂದು ವೇಳೆ ಸಾಕ್ಷಿದಾರರು ಒಕ್ಕಣೆ ಬರೆದ ನಂತರ ಸಹಿ ಹಾಕಿದ್ದರೆ 2 ನೇ ಸಾಕ್ಷಿದಾರರಾದ ಟಿ ಕೆ ಮೂರ್ತಿ ರವರ ಸಹಿಯು ನಿಪಿ-1ರಲ್ಲಿ ರಾಮಮೂರ್ತಿರವರ ಸಹಿ ಹಾಕಿದ ಚಿಕ್ಕ ಸ್ಥಳದಲ್ಲಿ ಹಾಕುವ ಅಗತ್ಯವಿರಲಿಲ್ಲ ಎಂದರೆ ಸಾಕ್ಷಿಯು ಅಲ್ಲಿ ಸಾಕಷ್ಟು ಸ್ಥಳವಿದೆ ಹೀಗಾಗಿ ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

9. ಟಿ ಕೆ ಮೂರ್ತಿ ಮತ್ತು 3ನೇ ಪ್ರತಿವಾದಿಯ ತಂದೆಯ ನಡುವೆ ಮನಸ್ತಾಪವಿದೆ ಎಂದರೆ ಸರಿಯಲ್ಲ. ಸಾಕ್ಷಿದಾರರಾದ ಬಿ ಎಸ್ ಲೋಕೇಶರಿಗೂ ನನಗೂ ಹಣದ ವ್ಯವಹಾರವಿದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮತ್ತು ನಾನು ನಿಪಿ-1 ಮತ್ತು ನಿಪಿ-2ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 (ಎ) ಮತ್ತು ನಿಪಿ-1(ಬಿ) ಹಾಗೂ ನಿಪಿ-2 (ಎ) ಮತ್ತು ನಿಪಿ-2 (ಬಿ) ರ ಸಹಿ ಒಂದೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.1ರಲ್ಲಿ ಮೃತ ಲೋಕೇಶರವರು ಹೆಬ್ಬೆಟ್ಟನ್ನು ಹಾಕಿರುವುದಿಲ್ಲ ಅದನ್ನು ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಪ್ರಮಾಣಪತ್ರವನುನ ನಾನು ಬಿ ಎಸ್ ಲೋಕೇಶ ರವರು ದಿಃ 18.05.2016 ರಂದು

*ನನ್ನಿಂದ ರೂ.20 ಸಾವಿರ ಸಾಲವನ್ನು ಪಡೆದು ಸದರಿ ಸಾಲದ ಭದ್ರತೆಗಾಗಿ ಮತ್ತೊಂದು ಆನ್ ಡಿಮ್ಯಾಂಡ್ ಪ್ರೋನೋಟ್ ಬರೆಸಿಕೊಟ್ಟಿದ್ದು ಎಂದು ತಿಳಿಸಿರುತ್ತಾರೆ. ಈ ವಿಚಾರ ಸತ್ಯವಾಗಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಾನು ಪ್ರಮಾಣಪತ್ರದಲ್ಲಿ ತಿಳಿಸಿರುವ ವಿಚಾರ ಸತ್ಯವಾಗಿದ್ದು ನ್ಯಾಯಾಲಯದಲ್ಲಿ ಈಗ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.*

*10. ನಾನು ಸಾಕ್ಷೀದಾರರು ಹಾಗೂ ಪತ್ರ ಬರಹಾಗಾರರು ಸೇರಿಕೊಂಡು ಮೃತ ಲೋಕೇಶ್ ನ ವಿರುದ್ಧ ಸುಳ್ಳು ದಾಖಲಾತಿಯನ್ನು ಸೃಷ್ಟಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಕೋರಿರುವಂತೆ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.*

***<u>ಮರು ವಿಚಾರಣೆ ಇಲ್ಲ.</u>***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆಎಂಎಫ್‌ಸಿ., ಪಾಂಡವಪುರ.***